(ಶ್ರೀ ಬಿ. ಜಿ. ಬಣಕಾರ್)

ಪವರ್‌ನ ಲೇಬರ್ ಹಚ್ಚಿಕೊಂಡಿದ್ದಾರೆ. ಮತ್ತೆ ಕೆಲವರು 40 ಹಾರ್ಸ್ ಪವರ್ ಉಪಯೋಗ ಮಾಡುತ್ತಿದ್ದರೂ 30 ಹಾರ್ಸ್ ಪವರ್‌ನ ಲೇಬರ್ ಹಚ್ಚಿಕೊಂಡು ಸರ್ಕಾರಕ್ಕೆ ಚೀಟಿಂಗ್ ಮಾಡುತ್ತಿದ್ದಾರೆ. ಇಂಥಾದ್ದನ್ನು ಸರ್ಕಾರದ ಗಮನಕ್ಕೆ ತೆಗೆದುಕೊಂಡು ಯೋಗ್ಯ ವಿಚಾರಣೆ ಮಾಡಿ ಉದ್ಯಮಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಮೋನಕೃತ್ಯಗಳು ಅಲ್ಲಲ್ಲೇ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಆಗಾಗ್ಗೆ ಬರುತ್ತಿರುತ್ತದೆ. ಆ ರೀತಿ ಬಂದಾಗ ಅವುಗಳ ಬಗ್ಗೆ ವಿಮರ್ಷೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಕೈಕೊಳ್ಳುತ್ತೇವೆ.

ಶ್ರೀ ಬಿ. ಜಿ. ಬಣಕಾರ್.—ಅನೇಕ ಕಡೆ ಉದ್ಯಮಿಗಳು 400 ಅಥವಾ 500 ಯೂನಿಟ್ ಗಳವರೆಗೆ ಕರೆಂಟನ್ನು ಉಪಯೋಗ ಮಾಡುತ್ತಿದ್ದರೂ ಸಹ ಮೀಟರನ್ನು ಬದಲಾವಣೆ ಮಾಡಿ ತಾವು ಉಪಯೋಗ ಮಾಡುತ್ತಿರುವುದು ಕೇವಲ 200 ಯೂನಿಟ್‌ಗಳು ಮಾತ್ರ ಎಂದು ತೋರಿಸುತ್ತಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಾರದಿದ್ದರೆ ಆ ಬಗ್ಗೆ ತನಿಖೆ ಮಾಡಿಸಿ ಅಂತಹ ಉದ್ಯಮಿಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂತಹ ಸಂದರ್ಭಗಳು ಕಂಡುಬಂದರೆ ಸೂಕ್ತ ಕ್ರಮವನ್ನು ಸರ್ಕಾರ ಕೈಕೊಳ್ಳುತ್ತದೆ.

ಶ್ರೀ ಬಿ. ಜಿ. ಬಣಕಾರ್.— ಈ ಉದ್ಯಮಿಗಳಿಂದ ಸರ್ಕಾರಕ್ಕೆ 6-7 ಕೋಟಿ ರೂಪಾಯಿಗಳ ವರೆಗೆ ಬಾಕಿ ಬರುವುದು ಇದೆ. ಇಷ್ಟು ಬಾಕಿ ಇಟ್ಟುಕೊಂಡಿದ್ದರೂ ಸಹ ಅಧಿಕಾರಿಗಳು ಅವರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಅದೇ ಗ್ರಾಮಾಂತರ ಪ್ರದೇಶಗಳಲ್ಲಿಯಾದರೆ ಸಣ್ಣ ಪುಟ್ಟ ಹಳ್ಳಿಯ ರೈತರು ಮತ್ತು ಮಧ್ಯಮವರ್ಗದ ಜನರು ಏನಾದರು ವಿದ್ಯುಚ್ಛಕ್ತಿಯ ಬಿಲ್‌ನ್ನು ಪಾವತಿ ಮಾಡದಿದ್ದರೆ ಕೂಡಲೇ ಮೀಟರನ್ನು ಕಿತ್ತುಕೊಂಡು ಹೋಗಿಬಿಡುತ್ತಾರೆ. ಇದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ! ಬಂದಿದ್ದರೆ ಇನ್ನು ಮುಂದೆಯಾದರೂ ಈ ರೀತಿ ಪಕ್ಷಪಾತ ತೋರಿಸಿದಂತೆ ನೋಡಿಕೊಳ್ಳಬೇಕಲ್ಲದೆ, ಉದ್ಯಮಿಗಳಿಂದ ಬರುವ ಬಾಕಿಯನ್ನು ವಸೂಲ ಮಾಡುವುದಕ್ಕೆ ಸೂಕ್ತ ಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ವಿಶೇಷ ಸಂದರ್ಭಗಳಲ್ಲಿ ದೊಡ್ಡ ದೊಡ್ಡ ಉದ್ಯಮಿಗಳಿಗೆ ಹಣ ಕಟ್ಟಲು ಸ್ವಲ್ಪ ಕಾಲಾವಕಾಶದ ವಿನಾಯಿತಿಯನ್ನು ಎಂ.ಎಸ್.ಇ.ಬಿ. ಅವರು ಕೊಟ್ಟಿದ್ದಾರೆ. ವಿಶೇಷ ಕಾರಣಗಳಿಗಾಗಿ ಆ ರೀತಿ ಕೊಟ್ಟಿರುತ್ತಾರೆಯೇ ಹೊರತು ಅನಾವಶ್ಯಕವಾಗಿ ಹಣ ಬಾಕಿ ಸಿಲ್ಲುವುದಕ್ಕೆ ಅವಕಾಶ ಕೊಡುವುದಿಲ್ಲ.

Missappropriation of Amount in Kolar Taluk Scheduled Castes Housing Co-operative Society

178. Sri C. BYRE GOWDA (Vemgal).—

Will the Minister for Co-operation be pleased to state :—

(*a*) the amount sanctioned by the Kolar taluk Depressed Class Co-operative Housing Society so far to Depressed Class People of Kolar taluk for construction of houses;

(*b*) the number of houses constructed so far ;

(*c*) whether the said society has paid the amount to applicants who have not completed the construction of house ;

† Indicates that the remarks or speechs have not been revised by the member concerned.

(*d*) whether any amount has been misappropriated in this society ;

(*e*) if so, the amount misappropriated and the action the Government have taken in this behalf ?

Sri A. SHANKARA ALVA (Minister for Co-operation). –

(*a*) Rs. 2,60,000.

(*b*) 73 houses.

(*c*) Yes.

(*d*) Yes.

(*e*) Rs. 963–78. The steps have been taken as per rule 16 (2) (*b*) of Mysore Co-operative Societies Rules 1960. The amount has been recovered.

ಶ್ರೀ ಎ. ಶಂಕರ ಆಳ್ವ.—'ಬ' ಪ್ರಶ್ನೆಗೆ ಉತ್ತರವಾಗಿ 73 ಎಂದಿರುವುದನ್ನು 70 ಎಂದು ತಿದ್ದಿಕೊಳ್ಳಬೇಕು.

ಶ್ರೀ ಸಿ. ಬೈರೇಗೌಡ.—ನನ್ನ ಮೂರನೇ ಪ್ರಶ್ನೆಗೆ ಹಣ ಪಾವತಿ ಮಾಡರಾಗಿದೆ ಎಂದು ಹೇಳಿದ್ದೀರಿ. ಮನೆಗಳನ್ನು ಕಟ್ಟಿದಿದ್ದರೂ ಹಣ ಕೊಡುವುದಕ್ಕೆ ಅವಕಾಶ ಏನಾದರು ಇದೆಯೇ ?

† ಶ್ರೀ ಎ. ಶಂಕರ ಆಳ್ವ.—ಮನೆ ಕಟ್ಟಿದ್ದಾರೆ. ಆದರೆ 29 ಮನೆಗಳನ್ನು ಇನ್ನೂ ಕಟ್ಟಿ ಮುಗಿಸಿಲ್ಲ. ಪೂರ್ತಿ ಕಟ್ಟಿಸದೇ ಇರುವಾಗ ಎರಡು ಮತ್ತು ಮೂರನೇ ಕಂತಿನ ಹಣವನ್ನು ಕೊಟ್ಟಿರುವುದು ತಪ್ಪು.

ಶ್ರೀ ಸಿ. ಬೈರೇಗೌಡ.—ಮನೆಗಳನ್ನು ಕಟ್ಟಿಸದೇ ಹಣ ಕೊಟ್ಟಿರುವ ನಿದರ್ಶನಗಳು ಇವೆ. ಅಂತಹದನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದರಲ್ಲಿ ಫೇರ್ ಆಗಿದೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. 70 ಮನೆಗಳನ್ನು ಕಟ್ಟಿ ಮುಗಿಸಲಾಗಿದೆ. 20 ಮನೆಗಳನ್ನು ಕಟ್ಟುತ್ತಿದ್ದಾರೆ. ಕಟ್ಟುತ್ತಿರುವಾಗಲೇ ಬಿಲ್ ಹಣವನ್ನು ಕೊಟ್ಟುಬಿಟ್ಟಿದ್ದಾರೆ. ಈ ರೀತಿ ಕಟ್ಟುತ್ತಿರುವಾಗಲೇ 2 ಮತ್ತು 3ನೇ ಕಂತುಗಳನ್ನು ಕೊಟ್ಟರೆ ಅದು ತಪ್ಪಾಗುತ್ತದೆಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—963–78 ರೂಪಾಯಿಗಳು ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಇದಕ್ಕಿಂತ ಹೆಚ್ಚು ಹಣ ದುರುಪಯೋಗವಾಗಿದೆ ಎಂದು ನನಗೆ ತಿಳಿದುಬಂದಿದೆ. ಕೇವಲ 963–78 ರೂಪಾಯಿಗಳು ದುರುಪಯೋಗವಾಗಿರುವುದು ಎಂದು ಯಾವ ವರ್ಷದ ಆಡಿಟ್ ರಿಪೋರ್ಟಿನಿಂದ ತಮಗೆ ಗೊತ್ತಾಗಿದೆ ?

ಶ್ರೀ ಎ. ಶಂಕರ ಆಳ್ವ.—ಆ ವಿವರ ಈಗ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. 963–78 ರೂಪಾಯಿಗಳು ದುರುಪಯೋಗವಾಗಿರುವುದು ಕಂಡುಬಂದು ಅದನ್ನು ಈಗ ವಸೂಲಿ ಮಾಡರಾಗಿದೆ.

S.C./S.T. House Building Co-operative Societies

579. Sri K. SIDDAIAH (Santhemarahalli).—

Will the Minister for Co-operation be pleased to state :—

(*a*) the total number of House Building Co-operative Societies for SCs. and STs. existing in the State ;